<u>ಸಾಕ್ಷಿಯನ್ನು ದಿಃ 06.03.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಮುಂದುವರಿದ **ಪಾಟೀ ಸವಾಲುಃ 2 ರಿಂದ 10** ನೇ ಪ್ರತಿವಾದಿ ಪರ ಬಿಎನ್ ಪಿ ವಕೀಲರಿಂದಃ</u>

ಐಟಂ ನಂಬರ್ 17 ಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನೀವು ನೋಡಿರುತ್ತೀರಾ ಎಂದರೆ ಹೌದು. ಆ ಜಾಗ ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಬೊಳಿಯ ಪೂಜಾರಿ ಅವರ ಹೆಸರಿನಲ್ಲಿದೆ. ಆ ಜಾಗ ಈಗಲೂ ಸಹ ಬೊಳಿಯ ಪೂಜಾರಿ ಅವರ ಹೆಸರಿನಲ್ಲಿ ಇರುತ್ತದಾ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂಬರ್ 17 ಆಸ್ತಿಗಳನ್ನು ಪಾಲು ಆಗಬೇಕೆಂದು ಯಾವ ಆಧಾರದ ಮೇಲೆ ಕೇಳುತ್ತಿದ್ದಿರೀ ಎಂದರೆ ಆ ಆಸ್ತಿ ನನ್ನ ತಾಯಿಯ ತಂದೆಯ ಆಸ್ತಿ ಆಗಿರುವುದರಿಂದ ನಾನು ಪಾಲನ್ನು ಕೇಳುತ್ತಿದ್ದೇನೆ. ಬೊಳಿಯ ಪೂಜಾರಿಯವರಿಗೆ ಆ ಆಸ್ತಿಗಳು ಹೇಗೆ ಬಂದವು ಎಂದರೆ ಅದು ಮೂಲ ಗೇಣಿ ಆಸ್ತಿಯಾಗಿರುತ್ತದೆ. ಅದು ಸರಕಾರದಿಂದ ದರ್ಕಾಸ್ತಿಗೆ ಕೊಟ್ಟ ಆಸ್ತಿಯಾಗಿರುವುದಿಲ್ಲ. ಐಟಂ ನಂ.17 ರ ಆಸ್ತಿಯಲ್ಲಿ ಏನೆಲ್ಲ ಕೃಷಿ ಇದೆ ಎಂದರೆ ರಬ್ಬರ್ ಅಡಿಕೆ ಗಿಡ ಇರಬಹುದು. ಐಟಂ ನಂ.17 ರ ಆಸ್ತಿಯ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.17 ರ ಆಸ್ತಿ ಪ್ರಸ್ತುತ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಐಟಂ ನಂ.17 ರ ಆಸ್ತಿಯು ದಾವೆ ದಾಖಲಿಸುವಾಗ ಯಾರ ಹೆಸರಿನಲ್ಲಿ ಇತ್ತು ಎಂದರೆ ಬೊಳಿಯ ಪೂಜಾರಿ ಅವರ ಹೆಸರಿನಲ್ಲಿಯೇ ಇತ್ತು. ಬೊಳಿಯ ಪೂಜಾರಿ ಅವರ ಹೆಸರಿನಲ್ಲಿ ಇತ್ತು ಎಂದು ಹೇಳುವುದಕ್ಕೆ ಯಾವುದಾದರೂ ದಾಖಲಾತಿ ಇರುತ್ತದೆಯಾ ಎಂದರೆ ದಾಖಲಾತಿ ಇದೆ. ಅವರ ಹೆಸರಿನಲ್ಲಿ ಇದ್ದ ಬಗ್ಗೆ ಯಾವ ದಾಖಲೆ ಇದೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.17 ರ ಆಸ್ತಿ ನಾರಾಯಣ ಪೂಜಾರಿಯವರ ಹೆಸರಿಗೆ ದರ್ಕಾಸ್ತು ಆಗಿರುವ ಬಗ್ಗೆ ನಿಮಗೆ ಗೊತ್ತಾ ಅಥವಾ ಇಲ್ಲವಾ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ಪೂಜಾರಿ ಅವರಿಗೆ ಸ್ವಂತ ನೆಲೆಯಲ್ಲಿ ದರ್ಕಾಸ್ತು

ಆಗಿರುವ ಬಗ್ಗೆ ನಿಮಗೆ ಗೊತ್ತಾ ಎಂದರೆ ನನಗೆ ಗೊತ್ತಿಲ್ಲ. ತದನಂತರದಲ್ಲಿ ನಾರಾಯಣ ಪೂಜಾರಿಯವರು ಅವರ ಮಗಳು ಸುನಂದ ರವರಿಗೆ ವ್ಯವಸ್ಥಾಪನಾ ಪತ್ರದ ಮೂಲಕ ಅವರಿಗೆ ಕೊಟ್ಟ ಬಗ್ಗೆ ನಿಮಗೆ ಗೊತ್ತಾ ಎಂದರೆ ನನಗೆ ಗೊತ್ತಿಲ್ಲ. ಸ್ವಂತ ಹಕ್ಕಿನ ಆಸ್ತಿಯಾದ ಕಾರಣ ನಾರಾಯಣ ಪೂಜಾರಿಯವರು ಅವರ ಮಗಳ ಹೆಸರಿಗೆ ಮಾಡಿದ್ದಾರೆ ಎಂದರೆ ವ್ಯವಸ್ಥಾಪನಾ ಪತ್ರ ಮಾಡಿದ ಬಗ್ಗೆ ಗೊತ್ತು, ಸಾಕ್ಷಿ ಮುಂದುವರಿದು ಅದು ಅವರ ಸ್ವಂತ ಆಸ್ತಿ ಆಗುವುದಿಲ್ಲ. ನಾರಾಯಣ ಪೂಜಾರಿಯವರ ಸ್ವಂತ ಆಸ್ತಿ ಅದು, 1964 ರಲ್ಲಿ ಸರಕಾರದಿಂದ ದರ್ಕಾಸ್ತು ಮೂಲಕ ಮಂಜೂರಾದ ಆಸ್ತಿ ಎಂದರೆ ಅದು ಅವರ ಸ್ವಂತ ಆಸ್ತಿ ಆಗಿರುವುದಿಲ್ಲ, ಅದು ನನ್ನ ಅಜ್ಜನ ಆಸ್ತಿ.

ನಿಮ್ಮ ಪ್ರಕಾರ ನಾರಾಯಣ ಪೂಜಾರಿಯವರಿಗೆ ಸರಕಾರದಿಂದ ದರ್ಕಾಸ್ತು ಕೊಟ್ಟಿದ್ದು ಯಾವ ಆಧಾರದಲ್ಲಿ ಎಂದರೆ ಕೃಷಿ ಆಧಾರದ ಮೇಲೆ ಕೊಟ್ಟಿರುತ್ತಾರೆ. ಅವರು ಕೃಷಿ ಮಾಡಿದ ಕಾರಣ ಕೊಟ್ಟದ್ದು ಎಂದರೆ ಸರಿ. ನಿಮ್ಮ ಅಜ್ಜ ಬೊಳಿಯ ಪೂಜಾರಿಯವರು ಯಾವಾಗ ತೀರಿದ್ದು ಎಂದರೆ 1968 ರಲ್ಲಿ ತೀರಿಕೊಂಡಿರುತ್ತಾರೆ. ನಿಮ್ಮ ಪ್ರಕಾರ ಬೊಳಿಯ ಪೂಜಾರಿಯವರು ಇರುವಾಗಲೇ ಅವರ ಮಗನ ಹೆಸರಿಗೆ ದರ್ಕಾಸ್ತು ಆಗಿರುತ್ತದೆ ಎಂದರೆ ಅವರ ಹೆಸರಿನಲ್ಲಿ ದರ್ಕಾಸ್ತು ಆಗಿರುವುದಿಲ್ಲ, ನನ್ನ ಅಜ್ಜನ ಹೆಸರಿನಲ್ಲಿ ದರ್ಕಾಸ್ತು ಆಗಿರುತ್ತದೆ. ಬೊಳಿಯ ಪೂಜಾರಿಯವರ ಹೆಸರಿಗೆ ದರ್ಕಾಸ್ತು ಆದ ಬಗ್ಗೆ ದಾಖಲಾತಿಗಳು ಇವೆಯಾ ಎಂದರೆ ಇದೆ. ಅದರ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ ಎಂದರೆ ಹಾಜರುಪಡಿಸಬಹುದು. ಸರಕಾರದಿಂದ ಯಾವುದೇ ಆಸ್ತಿಗಳು ಬೊಳಿಯ ಪೂಜಾರಿಯವರ ಹೆಸರಿಗೆ ಕೊಟ್ಟಿದ್ದು ಇಲ್ಲ ಅದನ್ನು ನಾರಾಯಣ ಪೂಜಾರಿಯವರ ಹೆಸರಿಗೆ ಕೊಟ್ಟದ್ದು ಎಂದರೆ ಸರಿಯಲ್ಲ.

ಐಟಂ ನಂಬರ್ 17 ಆಸ್ತಿಗೆ ಯಾವ ಆಸ್ತಿಗಳು ಲಗತ್ತಾಗಿವೆ ಎಂದರೆ ನನಗೆ ಗೊತ್ತಿಲ್ಲ. ಬೊಳಿಯ ಪೂಜಾರಿಯವರು ಮರಣ ಹೊಂದುವ ಕಾಲಕ್ಕೆ ಯಾವ ಯಾವ ಆಸ್ತಿಗಳು ಬೊಳಿಯ ಪೂಜಾರಿಯವರ ಹೆಸರಿಗೆ ಇತ್ತು ಎಂದರೆ ಗದ್ದೆ, ಕುಮ್ಕಿ ಜಾಗ ಇತ್ತು, ಯಾವ್ಯಾವ ಸರ್ವೆ ನಂಬರುಗಳು ಎಂದು ನನಗೆ ನೆನಪಿಲ್ಲ. ಐಟಂ ನಂಬರ್ 17 ಆಸ್ತಿಗಳನ್ನು ನಾರಾಯಣ

ಪೂಜಾರಿಯವರು ಅವರ ಸ್ವಂತ ನೆಲೆಯಲ್ಲಿ ಕೃಷಿ ಮಾಡಿದ ಬಗ್ಗೆ ನೀವು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. ನನಗೆ ಕೊಟ್ಟ ಮಾಹಿತಿಯಂತೆ ಐಟಂ ನಂ.17 ಆಸ್ತಿ ಕೂಡಾ ವಾದ ಪತ್ರದ ಎಕ್ಸ್ ಶೆಡ್ಯೂಲ್ ಆಸ್ತಿ ಲಗ್ತಿ ಕುಮ್ಕಿ ಭೂಮಿ ಅದರಲ್ಲಿ ನಾರಾಯಣ ಪೂಜಾರಿಯವರು ಸ್ವಂತ ನೆಲೆಯಲ್ಲಿ ಕೃಷಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೇ ಆ ಕುಮ್ಕಿ ಭೂಮಿಗಳನ್ನು ನಾರಾಯಣ ಪೂಜಾರಿಯವರ ಹೆಸರಿಗೆ ಸರಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂಬರ್ 17 ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆದ ಕಾರಣವೇ ನಿಮ್ಮ ತಾಯಿ ಅವರ ಜೀವಿತ ಕಾಲದಲ್ಲಿ ದಾವಾ ಆಸ್ತಿಗಳಲ್ಲಿ ಪಾಲು ಕೇಳಿಲ್ಲ ಹಾಗೂ ದಾವೆಯನ್ನೂ ಸಹ ಸಲ್ಲಿಸಿಲ್ಲ ಎಂದರೆ ಅವರು ಪಾಲು ಕೇಳಬೇಕಾಗಿತ್ತು. ನಿಮ್ಮ ತಾಯಿಯವರು ಪಾಲು ಕೇಳದ ಕಾರಣ ನಿಮಗೆ ಆ ಆಸ್ತಿಗಳಲ್ಲಿ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿಯವರು ಹಕ್ಕು ಇಲ್ಲದ ಕಾರಣವೇ ಒ ಎಸ್ ನಂಬರ್ 58/2013 ರ ದಾವೆಯಲ್ಲಿ ನಿಮ್ಮ ತಾಯಿಯವರು ದಾವೆಯಲ್ಲಿ ಹಾಜರಾಗಿದ್ದರೂ ಸಹ ಪಾಲನ್ನು ಕೇಳಿಲ್ಲ ಎಂದರೆ ಪಾಲನ್ನು ಕೇಳಿರುತ್ತೇವೆ. ಆ ದಾವೆಯಲ್ಲಿ ನಿಮ್ಮ ತಾಯಿ ಎಷ್ಟನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿ ಶೀನಪ್ಪ ಪೂಜಾರಿಯವರ ಚಿತಾವಣೆ ಮೇರೆಗೆ ಆಸ್ತಿಯನ್ನು ಲಪಟಾಯಿಸಲು ಈ ಸುಳ್ಳು ದಾವೆಯನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು